ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

**ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ ೫೭) ನಮೂನೆ ಸಂಖ್ಯೆ ೪ (ಸಿವಿಲ್)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್ ೧೧೨೮-೨೦೧೪**

.ವಿರುದ್ದ

ಪಿ.ಡಬ್ಲೂ:-೦೯
ಸಿ.ಡಬ್ಲೂ:-೧೧

ಹೆಸರು : ಅರುಣ್ ಪಿ ಗೌಡ
ತಂದೆಯ ಹೆಸರು : ಪುಟ್ಟೇ ಗೌಡ
ವಯಸ್ಸು : ೩೬ ವರ್ಷ
ಉದ್ಯೋಗ : ಪೊಲೀಸ್ ಮುಖ್ಯ ಪೇದೆ
ವಾಸಸ್ಥಳ : ಮಾದನಾಯಕನಹಳ್ಳಿ

ದಿ:೦೫-೦೨-೨೦೨೬ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ**

೨೦೧೩ ರಿಂದ ೨೦೨೧ನೇ ಸಾಲಿನವರೆಗೆ ಹೊಸಕೋಟೆ ಪೊ.ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: ೦೮.೦೮.೨೦೧೪ ರಂದು ಚಾ.ಸಾ.೧೪ ರವರು ಅಪರಾಧಿಕ ಕ್ರಮ ಸಂಖ್ಯೆ ೧೦೮-೨೦೧೪ರಲ್ಲಿನ ಆರೋಪಿತರನ್ನು ಪತ್ತೆ ಹಚ್ಚುವ ಸಲುವಾಗಿ ನನ್ನನ್ನು, ಚಾ.ಸಾ.೯, ೧೦ ಮತ್ತು ೧೩ ರವರನ್ನು ನೇಮಿಸಿದ್ದರು. ತದನಂತರ ಚಾ.ಸಾ.೧೩ ರವರು ಕೆ.ಜಿ.ಎಫ್. ಪ್ರಾದೇಶಿಕ ಸಾರಿಗೆ ಕಛೇರಿಗೆ ದೂರವಾಣಿ ಕರೆ ಮಾಡಿ ಮೋಟರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-೦೮-ಜೆ-೪೪೭೬ರ ಮಾಹಿತಿಯನ್ನು ಕೇಳಿ ಪಡೆದುಕೊಂಡಿರುತ್ತಾರೆ ಮತ್ತು ಸದರಿ ಮೋಟರ್ ಸೈಕಲ್ ನ ಮಾಲೀಕ ಮಾಲೂರು ನಿವಾಸಿಯಾದ ಮಂಜುನಾಥ ಎಂದು ತಿಳಿದು ಬಂದಿರುತ್ತದೆ. ನಂತರ ರಾತ್ರಿ ೯.೩೦ ಗಂಟೆಗೆ ಸದರಿ ಮಂಜುನಾಥ ಕುರಿತು ಬಾತ್ಮಿದಾರರಿಂದ ಮಾಹಿತಿ ಪಡೆದುಕೊಂಡು ಹೊಸಕೋಟೆ ಪಟ್ಟಣ್ಣದ ಸಂತೆ ಗೇಟ್ ಬಳಿ ರಸ್ತೆಗಾವಲು ಕಾಯುತ್ತಿದ್ದಾಗ ರಾತ್ರಿ ಸುಮಾರು ೧೦.೩೦ ಗಂಟೆ ಸಮಯದಲ್ಲಿ ಮೋಟರ್ ಸೈಕಲ್ ನಲ್ಲಿ ಇಬ್ಬರು ವ್ಯಕ್ತಿಗಳು ಬಂದಿದ್ದು ಮತ್ತು ಅವರನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ಅವರುಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ. ನಂತರ ನಾನು ಮತ್ತು ಚಾ.ಸಾ.೧೩ ರವರು ಮೋಟರ್ ಸೈಕಲ್ ನಲ್ಲಿ ಹಿಂಬದಿ ಕುಳಿತಿದ್ದ ವ್ಯಕ್ತಿಯನ್ನು ಹಿಡಿದುಕೊಂಡಿರುತ್ತೇವೆ ಮತ್ತು ಮೋಟರ್ ಸೈಕಲ್ ಸವಾರನ್ನನ್ನು ಚಾ.ಸಾ.೯

ಮತ್ತು ೧೦ ರವರು ಹಿಡಿದುಕೊಂಡಿರುತ್ತಾರೆ. ನಂತರ ಸದರಿ ವ್ಯಕ್ತಿಗಳ ಹೆಸರು ವಿಚಾರಿಸಲಾಗಿ ಮೋಟರ್ ಸೈಕಲ್ ಚಲಾಯಿಸುತ್ತಿದ್ದವನ ಹೆಸರು ಬಾಲಾಜಿ ಎಂದು ಮತ್ತು ಸಹಸವಾರನ ಹೆಸರು ಮಂಜುನಾಥ ಎಂದು ತಿಳಿದು ಬಂದಿರುತ್ತದೆ. ತದನಂತರ ನಾವುಗಳು ಸದರಿ ವ್ಯಕ್ತಿಗಳನ್ನು ಠಾಣೆಗೆ ಕರೆದುಕೊಂಡು ಹೋಗಿ ಚಾ.ಸಾ.೧೪ ರವರ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ದಿನ ನಾವು ವಶಕ್ಕೆ ಪಡೆದುಕೊಂಡಿದ್ದ ಆರೋಪಿ ಮತ್ತು ಮೋಟರ್ ಸೈಕಲ್ ನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ೨ನೇ ಆರೋಪಿ ಆಗಿರುತ್ತಾನೆ. ೧ನೇ ಆರೋಪಿಯು ಮೃತಪಟ್ಟಿರುತ್ತಾರೆ. ಈಗ ನನಗೆ ತೋರಿಸಿದ ನಿಪಿ.೪ ಛಾಯಾಚಿತ್ರದಲ್ಲಿ ಕಾಣುತ್ತಿರುವ ಮೋಟರ್ ಸೈಕಲ್ ಆಗಿರುತ್ತದೆ.

**ಪಾಟೀ ಸವಾಲು:** ಆರೋಪಿ ಪರ ಶ್ರೀ ಆರ್.ಎಸ್.ಜಿ ವಕೀಲರಿಂದ

ಸದರಿ ದಿನ ಚಾ.ಸಾ.14 ರವರು ನನ್ನನ್ನು ಮತ್ತು ಇತರರನ್ನು ಆರೋಪಿ ಪತ್ತೆ ಸಲುವಾಗಿ ನಿಯೋಜನೆ ಮಾಡಿದ ಕುರಿತು ಮೌಖಿಕವಾಗಿ ಆದೇಶ ಮಾಡಿದ್ದರು. ಸದರಿ ದಿನ ಚಾ.ಸಾ.14 ರವರು ಆರೋಪಿತರ ಕುರಿತು ಯಾವುದೇ ರೇಖಾ ಚಿತ್ರ ಅಥವಾ ಮಾಹಿತಿಯನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೋಟರ್ ಸೈಕಲ್ ನ ಕ್ರಮ ಸಂಖ್ಯೆ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ದಿನ ನಾವು ರಾತ್ರಿ 9.15 ಗಂಟೆಗೆ ಠಾಣೆಯಿಂದ ಹೊರಟು ರಾತ್ರಿ 9.30 ಗಂಟೆಗೆ ಸಂತೆ ಗೇಟ್ ಬಳಿ ಹೋಗಿರುತ್ತೇವೆ. ನಾನು ಮತ್ತು ಇತರರು ಯಾವುದೇ ಆರೋಪಿತರನ್ನು ಪತ್ತೆ ಹಚ್ಚುವ ಸಲುವಾಗಿ ಎಲ್ಲಿಯೂ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಆರೋಪಿತರನ್ನು ಮತ್ತು ಮೋಟರ್ ಸೈಕಲ್ ನ್ನು ವಶಕ್ಕೆ ಪಡೆದುಕೊಂಡು ತನಿಖಾಧಿಕಾರಿ ಮುಂದೆ ಹಾಜರುಪಡಿಸಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಥಮ ಬಾರಿಗೆ ೨ನೇ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** –ಇಲ್ಲ–

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

Case called out.

Accused no.2 is present.

C.W.11 is present and examined as P.W.9.

Issue summons to C.W.5, 12 and 14 by 26.03.2026.

**Prl. Civil Judge & JMFC.,**
**Hosakote.**